| ಬೆವಿಕಂ BESCOM | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ<br>(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ) |
|---|---|

| | |
|---|---|
| ದೂರವಾಣಿ : 080-2234 1199<br>ಇಮೇಲ್ ಐಡಿ : gmdsm@bescom.co.in | ಪ್ರಧಾನ ವ್ಯವಸ್ಥಾಪಕರು (ವಿ), ಡಿಎಸ್ಎಂ ರವರ ಕಛೇರಿ, ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು |
| ಸಂಖ್ಯೆ : ಬೆವಿಕಂ/ಬಿಸಿ–51/2019–20/CYS-18 | ದಿನಾಂಕ: 12-09-2019 |

# ಸುತ್ತೋಲೆ

**ವಿಷಯ:** ವಿದ್ಯುಚ್ಛಕ್ತಿಯ ಸಮರ್ಪಕ ಬಳಕೆ ಮತ್ತು ಉಳಿತಾಯಕ್ಕಾಗಿ ಹವಾ ನಿಯಂತ್ರಣ(ಎಸಿ) ಯಂತ್ರದ ತಾಪಮಾನ ನಿಗಧಿಗೆ ಸಂಬಂಧಿಸಿದಂತೆ

**ಉಲ್ಲೇಖ:** 1. ಕಾರ್ಯದರ್ಶಿಗಳು, ಕೇಂದ್ರ ಇಂಧನ ಮಂತ್ರಾಲಯ, ನವದೆಹಲಿ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: D.O no.11/3/2018– EC, ದಿನಾಂಕ:22.05.2019

2. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ ರವರ ಸುತ್ತೋಲೆ ಸಂಖ್ಯೆ: ENERGY/139/VSC/ 2019-JD-ENERGY SECRETARIAT, ದಿನಾಂಕ:08.08.2019

3. ನಿರ್ದೇಶಕರು(ತಾಂತ್ರಿಕ) ರವರ ಅನುಮೋದನೆ ದಿನಾಂಕ:09.09.2019

**********

**ಪೀಠಿಕೆ:**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ, ಹವಾ ನಿಯಂತ್ರಣಗಳ(ಎಸಿ) ಮೂಲಕ ಕೊಠಡಿಗಳ ತಾಪಮಾನವನ್ನು ಸಾಮಾನ್ಯವಾಗಿ $20^0C$-$21^0C$ ಗೆ ಹೊಂದಿಸಲಾಗುತ್ತಿದ್ದು, ಇಂಧನ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಹವಾ ನಿಯಂತ್ರಣಗಳ ಮೂಲಕ ಕೊಠಡಿಗಳ ತಾಪಮಾನವನ್ನು ಪ್ರತಿ $1^0C$ ನಷ್ಟು ಏರಿಸಿದಾಗ, 6% ರಷ್ಟು ವಿದ್ಯುತ್ ಉಳಿತಾಯವಾಗುವುದು ಮತ್ತು ತಾಪಮಾನವನ್ನು $20^0C$-$21^0C$ ಗೆ ಬದಲಾಗಿ $24^0C$-$25^0C$ ಗೆ ಹೊಂದಿಸಿದ್ದಲ್ಲಿ, 24% ರಷ್ಟು ವಿದ್ಯುತ್ ಉಳಿತಾಯವಾಗುವುದು. ಇದರಿಂದ ದಿನನಿತ್ಯದ ಕಾರ್ಯಚಟುವಟಿಕೆಗಳಿಗೆ ಮತ್ತು ದೇಹಾರೋಗ್ಯಕ್ಕೆ ಕೂಡ ಯಾವುದೇ ಪ್ರತಿಕೂಲ ಪರಿಣಾಮ ಉಂಟಾಗುವುದಿಲ್ಲವಾದ್ದರಿಂದ ಹವಾ ನಿಯಂತ್ರಣ ಯಂತ್ರದ ತಾಪಮಾನವನ್ನು $24^0C$-$25^0C$ ಗೆ ಹೊಂದಿಸುವಂತೆ, ಬ್ಯೂರೋ ಆಫ್ ಎನರ್ಜಿ ಎಫಿಷಿಯೆನ್ಸಿ(ಬಿ.ಇ.ಇ.), ಭಾರತ ಸರ್ಕಾರ ರವರು, ಶಿಫಾರಸ್ಸು ಮಾಡಿರುವುದಾಗಿ ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ ರವರು ಉಲ್ಲೇಖ(2) ರನ್ವಯ ಬಿ.ಇ.ಇ. ರವರ ಮಾರ್ಗಸೂಚಿಗಳನ್ನು ರಾಜ್ಯ ಸರ್ಕಾರದ ಎಲ್ಲಾ ಇಲಾಖೆ/ಸಂಸ್ಥೆಗಳಲ್ಲಿ ಅಳವಡಿಸಿಕೊಳ್ಳಲು ಸೂಚಿಸಿರುತ್ತಾರೆ.

**ಆದ್ದರಿಂದ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ;**

ಇಂಧನ ಉಳಿತಾಯದ ನಿಟ್ಟಿನಲ್ಲಿ, ಹವಾ ನಿಯಂತ್ರಣಗಳನ್ನು(ಎಸಿ) ಉಪಯೋಗಿಸುತ್ತಿರುವ ಬೆವಿಕಂನ ಎಲ್ಲಾ ಕಛೇರಿಗಳ ಕೊಠಡಿಗಳಲ್ಲಿ ತಾಪಮಾನವನ್ನು $24^0C$-$25^0C$ ಗೆ ಹೊಂದಿಸಿಕೊಳ್ಳುವ ಮೂಲಕ ವಿದ್ಯುತ್ ಉಳಿತಾಯ ಮಾಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

12/9/19

ಪ್ರಧಾನ ವ್ಯವಸ್ಥಾಪಕರು(ವಿ),
ಡಿ.ಎಸ್.ಎಂ, ಬೆವಿಕಂ

**ಪ್ರತಿಗಳು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ:**

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), ನಿಗಮ ಕಾರ್ಯಾಲಯ, ಬೆವಿಕಂ.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ&ಪಾ ವಲಯ, ಬೆವಿಕಂ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು(ವಿ), ನಿಗಮ ಕಾರ್ಯಾಲಯ, ಬೆವಿಕಂ.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಬೆವಿಕಂ.
5. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು(ವಿ), ನಿಗಮ ಕಾರ್ಯಾಲಯ, ಬೆವಿಕಂ.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂ.
7. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂ.
8. ವ್ಯ.ನಿ/ನಿ(ಹ) ರವರ ಆಪ್ತ ಕಾರ್ಯದರ್ಶಿ, ಬೆವಿಕಂ ರವರು ವ್ಯ.ನಿ/ನಿ(ಹ), ಬೆವಿಕಂ ರವರ ಗಮನಕ್ಕೆ ತರಲು ನಿರ್ದೇಶಿಸಿದೆ.
9. ಮುಖ್ಯ ಕಡತ.